**MVC** 280-23 **PW**-1

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 31.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀ A S S, ವಕೀಲರಿಂದ ಃ**

2. ನಾನು ಪಿ ಯೂ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನದು ಪ್ಯಾನ್ ಕಾರ್ಡ ಇದೆ. ನಾನು ಆದಾಯ ತೆರಿಗೆ ಕಟ್ಟುವುದಿಲ್ಲ. ಅರ್ಜಿದಾರ ನಂಃ 4 ನನಗೆ ಮಾವನಾಗಬೇಕು. ಅವರು Medical Representative ಆಗಿ ಕೆಲಸ ಮಾಡುತ್ತಾರೆ ಅಂದರೆ ಸರಿಯಲ್ಲ. ಅವರ ಪ್ಯಾನ್ ಕಾರ್ಡ ಇದ್ದ ಬಗ್ಗೆ ಗೊತ್ತಿಲ್ಲ. ನಾನು ಎಲ್ಲಾ ಅರ್ಜಿದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ಮನೆಯಲ್ಲಿ ಯಾರು ಯಾರು ಏನೇನು ಕೆಲಸ ಮಾಡುತ್ತಾರೆಂದು ಮಾಹಿತಿ ಇದೆ. ನಾಲ್ಕನೇ ಅರ್ಜಿದಾರರು ಆದಾಯ ತೆರಿಗೆ ಕಟ್ಟುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. 5 ನೇ ಅರ್ಜಿದಾರಳು ನನಗೆ ಅತ್ತೆಯಾಗಬೇಕು. ಅವರು ಮನೆಗೆಲಸ ಮಾಡುತ್ತಾರೆ. 5 ನೇ ಅರ್ಜಿದಾರಳು 4 ನೇ ಅರ್ಜಿದಾರಳ ಆದಾಯದ ಮೇಲೆ ಅಲವಂಬನೆಯಾಗಿರುತ್ತಾಳೆ ಅಂದರೆ ಸರಿಯಲ್ಲ. ಅರ್ಜಿದಾರ 4 ಹಾಗೂ 5 ರವರು ಮೃತ ಮಹಮ್ಮದ ನವಾಜ ರವರ ಆದಾಯದ ಮೇಲೆ ಅವಲಂಬಿತರ ಇರಲಿಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಅರ್ಜಿದಾರ 4 ಹಾಗೂ 5 ಮಹಮ್ಮದ ನವಾಜರ ರವರ ಆದಾಯದ ಮೇಲೆ ಅವಲಂಬಿನೆಯಾಗಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3. ಅಪಘಾತವು ನೂಲ್ವಿ ಕ್ರಾಸ ಬಳಿಯ ಹೆದ್ದಾರಿಯಲ್ಲಿ ಆಗಿದೆ. 4 ನೇ ಅರ್ಜಿದಾರರು ದೂರು ನೀಡಿರುತ್ತಾರೆ. ಪೋಲಿಸರು ತನಿಖೆ ಮಾಡಿ ನನ್ನ ಗಂಡ ಹಾಗೂ ಲಾರಿ ಚಾಲಕನ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಅಂದರೆ ಸರಿ. ನನ್ನ ಗಂಡನ ವಿರುದ್ಧ ಸಲ್ಲಿಸಲಾಗಿದ್ದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುವ ಮೊದಲು ಈ ನ್ಯಾಯಾಲಯದಲ್ಲಿ ಪರಿಹಾರದ ಅರ್ಜಿ ಸಲ್ಲಿಸಿದ್ದೆ ಅಂದರೆ ಸರಿ. ಅರ್ಜಿ ಸಲ್ಲಿಸುವಾಗ ದೂರು ಪ್ರಥಮ ವರ್ತಮಾನ ವರದಿ, 4 ಆಧಾರ ಕಾರ್ಡಗಳ ಜರಾಕ್ಸ ಪ್ರತಿ ಬಿಟ್ಟರೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಅಂದರೆ ಮಾಹಿತಿ ಇಲ್ಲ. ಮಾನ್ಯ ಉಚ್ಚ ನ್ಯಾಯೀಲಯದಲ್ಲಿ ನಾವು ಸಲ್ಲಿಸಿದ ಪ್ರಕರಣದಲ್ಲಿ ಎದುರುದಾರ 1 ಹಾಗೂ 2 ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಮಾಹಿತಿ ಇಲ್ಲ. ಪೋಲಿಸರು ಸಿ ಸಿ ಕ್ಯಾಮರಾ ರಿಕಾರ್ಡಿಂಗ ಹಾಗೂ ಫೂಟೇಜ್ ತನಿಖೆಯಲ್ಲಿ ಹಾಜರಪಡಿಸಿಕೊಂಡಿರುತ್ತಾರೆ ಅಂದರೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದೇಲ್ಲಿ ಸಿ ಸಿ ಕ್ಯಾಮರಾ ಫೂಟೇಜ್ ಹಾಜರಪಡಿಸಿರುವ ಬಗ್ಗೆ ಗೊತ್ತಿಲ್ಲ.

**MVC** 280-23 **PW**-1

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.